**ಯೋಗಾಸನ ತರಬೇತಿ ಕೇಂದ್ರದ ಉಧ್ಘಾಟನೆ**

ಯಲಹಂಕ: ಸ್ಪರ್ಧಾತ್ಮಕ ಸಮಾ ಜದೊಂದಿಗೆ ಪ್ರತಿಸ್ಪಂದಿಸುವ ಆಧುನಿಕ ಮಾನವರ ದೈಹಿಕ ಮತ್ತು ಮಾನಸಿಕ ಕ್ಷೋಭೆಯ ಹತೋಟಿಗಾಗಿ, ಬದುಕಿನ ಉನ್ನತ ಭವಿಷ್ಯಕ್ಕಾಗಿ ಯೋಗಾಭ್ಯಾಸ ಸಿದ್ಧೌಷಧ. ಅನೇಕ ಕಾಯಿಲೆಗಳ ಹತೋಟಿಗಾಗಿ ಮತ್ತು ಕಾಯಿಲೆಗಳು ಬಾರದಂತೆ ಮುನ್ನೆಚ್ಚರಿಕೆಗಾಗಿ ಪೂರ್ವಜರು ವರವಾಗಿ ಕೊಟ್ಟ ಯೋಗಸನದ ಮೂಲಕ ಬದುಕನ್ನು ಆರೋಗ್ಯಪೂರ್ಣ ವಾಗಿಟ್ಟುಕೊಳ್ಳಲು ಯೋಗಾಭ್ಯಾಸ ನಿತ್ಯ ಅವಶ್ಯಕ.

ಈ ಯೋಗಸನದ ವ್ಯಾಪಕ ಪ್ರಚಾರಕ್ಕಾಗಿ ಹಾಗೂ ಅನಾರೋಗ್ಯದ ನಿಯಂತ್ರಣಕ್ಕಾಗಿ ' ಶ್ರೀ ಯೋಗಿನಾರಾಯಣ ಯೋಗಕೇಂದ್ರದ ವತಿಯಿಂದ ದಿನಾಂಕ ೬–೨ –೧೯೯೪ನೇ ಭಾನುವಾರದಿಂದ ಯೋಗಸನ ತರಗತಿಗಳು ಪ್ರಾರಂಭವಾಗಲಿದೆ.

ಈ ಯೋಗಸನ ತರಬೇತಿ ಕೇಂದ್ರದ ಉದ್ಘಾಟನೆಯನ್ನು ೫–೨–೧೯೯೪ ರಂದು ಶನಿವಾರ,ಖ್ಯಾತ ಕವಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷ್ಯತ್ತು–ತುಮಕೂರಿನ ಮಾಜಿ ಅಧ್ಯಕ್ಷರೂ ಆದ ಶ್ರೀಕವಿತಾ ಕ್ರಷ್ಣರವರು ನೆರವೇರಿಸಲಿದ್ದಾರೆ. ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಶ್ರೀ ಹೆಚ್. ಎನ್.ಸತ್ಯನಾರಾಯಣ ಹಾಗೂ ಶೀ ಗುರುರಾಜಸೇವಾಸಮಿತಿ (ಯಲಹಂಕ ಉಪನಗರ)ಉಪಾಧ್ಯಕ್ಷರಾದ ಶ್ರೀ ಜಿ.ವಿ.ಪ್ರಭಾರಕರವರು ಆಗಮಿಸಿದ್ದರು.

ಇದೇ ಸಂಧರ್ಬದಲ್ಲಿ ಯೋಗೋಪಾಧ್ಯಾಯರಾದ ಶ್ರೀ ಟಿ. ನಾರಾಯಣಪ್ಪನವರಿಂದ ಯೋಗಸನ ಮತ್ತು ಷಟ್ಕರ್ಮ ವಿಧಿಗಳ (ವಸ್ತ್ರಧೌತಿ,ದಾರಿಸಾರಧೌತಿ,ದಂಢನೀತಿ, ಉಷ:ಜಲನೇತಿ) ಪ್ರದರ್ಶನ ಹಾಗೂ ತರಬೇತಿಗೊಂಡ ಯೋಗಪಟುಗಳಿಂದ ವಿವಿಧ ಆಸನಗಳ ಪ್ರದರ್ಶನವಿರುತ್ತದೆ. ಗಾಲಿ ಮತ್ತು ಅಚ್ಚು ಕಾರ್ಖಾನೆಯ ಮಹಿಳಾ ಸಮಿತಿ ಹಾಲ್ ನಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಸಹ್ರದಯರು, ಶ್ರೀ ಯೋಭಿ ಲಾಷಿಗಳು ಹಾಗೂ ಯೋಗಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹಿಸಬೇಕೆಂದು ಯೋಗೋಪಾ ಧ್ಯಾಯರಾದ ಶ್ರೀ ಟಿ.ನಾರಾಯಣಪ್ಪನವರು ಬೆಂಗಳೂರಿನ ಜನತೆಯನ್ನು ಪ್ರಾರ್ಥಿಸಿಕೊಂಡಿದ್ದಾರೆ.

Feb 1st 1994 Hosa Diganta [Yogaasana tarabeti Kendrada Udhgatane.]